ದಿನೇ ದಿನೇ ಸಂಖ್ಯೆ ಬೆಳೆಯುತ್ತಾ ಹೋಯಿತು' ಎಂದು ಕಳೆದ ದಿನಗಳನ್ನು ನೆನಪುಮಾಡಿಕೊಂಡರು.

ಕೆ.ಆರ್.ಎಸ್. ಅಣೆಕಟ್ಟು ನಮಗೆಲ್ಲಾ ಗೊತ್ತು. ಮೈಸೂರಿಗೆ ಭೇಟಿನೀಡಿದವರೆಲ್ಲರೂ ಕೆ.ಆರ್.ಎಸ್.ಗೆ ಹೋಗದೆ ಪ್ರಯಾಣ ಪೂರ್ತಿಯಾಗುವುದಿಲ್ಲ. ಇದರ ಹಿನ್ನೀರಿನಿಂದಾಗಿ ವೇಣುಗೋಪಾಲ ಸ್ವಾಮಿ ದೇವಸ್ಥಾನ ಮುಳುಗಡೆಯಾಗುವುದರಲ್ಲಿತ್ತು. ಖ್ಯಾತ ಉದ್ಯಮಿ ಹರಿಖೋಡೆಯವರ ಮುಂದಾಳ್ತನದಲ್ಲಿ ದೇವಳವನ್ನು ಸ್ಥಳಾಂತರಿಸುವ ಕೆಲಸ ನಡೆಯುತ್ತಿತ್ತು.

ಖೋಡೆಯವರಿಗೆ ಅಂಕೇಗೌಡರ ಪುಸ್ತಕಾಲಯ ಮತ್ತು ಅದು ಅವ್ಯವಸ್ಥಿತವಾಗಿರುವುದು ಗಮನಕ್ಕೆ ಬಂತು. ಆರ್ಥಿಕ ಸಹಕಾರ ನೀಡುತ್ತೇನೆಂದರೂ ಗೌಡರು ಸಮ್ಮತಿಸಲಿಲ್ಲ. ಪುಸ್ತಕ ಮನೆಯ ನಿರ್ಮಾಣದ ಪ್ರಸ್ತಾಪಕ್ಕೆ ಖೋಡೆಯವರು ಮುನ್ನುಡಿಯಿಟ್ಟಾಗ ಗೌಡರು ತಲೆಯಲ್ಲಾಡಿಸಿದರು. ಅವರು ತನ್ನ ಇಂಜಿನಿಯರ್ ಮತ್ತು ಸಹಾಯಕರನ್ನು ಕ್ಷಿಪ್ರವಾಗಿ ಕಳುಹಿಸಿ 'ಪುಸ್ತಕ ಮನೆ'ಯ ವ್ಯವಸ್ಥೆ ಮಾಡಿಕೊಟ್ಟರು. ಪುಸ್ತಕವು ವ್ಯವಸ್ಥಿತವಾಗಿ ಜೋಡಣೆಯಾದಾಗ ಸುದ್ದಿಯಾಯಿತು. ವಾಚನಾಲಯದ ವೀಕ್ಷಣೆಗೆ ಜನರು ಬರಲಾರಂಭಿಸಿದರು. ಹೀಗೆ ಬಂದವರಿಗೆಲ್ಲಾ ಅತಿಥಿ ಸತ್ಕಾರ. ಹೊಟ್ಟೆ ತಂಪು ಮಾಡಿಯೇ ಬೀಳ್ಕೊಡುಗೆ.

## ಉಳಿಸಿದರೆ ಉಳಿಯುತ್ತದೆ!

ಅಂಕೇಗೌಡರದು ಏಕವ್ಯಕ್ತಿ ಸೈನ್ಯ. ಪುಸ್ತಕಗಳಿಗಾಗಿ ಓಡಾಡಿದರು. ಎಲ್ಲೆಲ್ಲಿ ಉತ್ತಮ ಸಂಗ್ರಹವಿದೆಯೋ ಅಲ್ಲೆಲ್ಲ ಜಾಲಾಡಿದರು. ಖರೀದಿಗೆ ಮೊದಲ ಆದ್ಯತೆ. ಪುಕ್ಕಟೆ ಇಲ್ಲ. ರಿಯಾಯಿತಿ ಕೇಳಿಯಾರಷ್ಟೇ. ಇವರ ಕಾಯಕವನ್ನು ಕೇಳಿದ ಅದ್ಯಾರೋ ಸಹೃದಯರು ತಮ್ಮಲ್ಲಿಂದ ಪುಸ್ತಕಗಳನ್ನು ನೀಡಿ ಸಹಕರಿಸಿದ್ದಿದೆ. ಉಡಾಫೆ ಮಾತನಾಡಿದವರ ಮನವನ್ನು ಗೆದ್ದು ಪಡೆದ ಪುಸ್ತಕಗಳೆಷ್ಟೋ. ಈಚೆಗೆ ಪುಸ್ತಕ ಖರೀದಿಸುವಾಗ ಸ್ವಲ್ಪ ಹೆಚ್ಚೇ ಖರೀದಿಸುತ್ತಾರೆ. ಪುಸ್ತಕ ಮನೆಗೆ ಬಂದವರು ಅಪೇಕ್ಷಿಸಿದರೆ ಮೂಲ ಬೆಲೆಯಲ್ಲಿ ಮಾರಾಟವನ್ನೂ ಮಾಡುತ್ತಾರೆ. ಇದರಿಂದ ಸ್ವಲ್ಪ ಮಟ್ಟಿನ ಗಳಿಕೆ.

ಮಾತಿನ ಮಧ್ಯೆ 'ಇದರಿಂದೇನು ಲಾಭ ಸರ್' ಎಂದು ಕಿಚಾಯಿಸಿದೆ. ಗೌಡರು ಕೆರಳಲಿಲ್ಲ, ಶಾಂತವಾಗಿ ಉತ್ತರಿಸಿದರು. 'ಇದು ದುಡ್ಡು ಮಾಡುವ ಕಾಯಕವಲ್ಲ. ಇದನ್ನೇ ಚೌಲ್ಟ್ರಿ (ಸಭಾಭವನ) ಮಾಡಿದರೆ ಹಣ ಮಾಡಬಹುದು. ಕೈತುಂಬಾ ಗಳಿಸಬಹುದು. ರಶೀದಿ ಪುಸ್ತಕ ಅಚ್ಚು ಹಾಕಿಸಿ ಬಂದವರ ಮುಂದೆ ಪುಸ್ತಕವನ್ನಿಡಬಹುದು. ನನ್ನ ಉದ್ದೇಶ ಅದಲ್ಲವಲ್ಲ. ಹಣದ ಹಿಂದೆ ಹೋಗೋನು ನಾನಲ್ಲ. ಆಂತರಿಕವಾಗಿ ಜಗತ್ತಿನ ಜ್ಞಾನವನ್ನು ಮುಂದಿನ ಪೀಳಿಗೆಗೆ ತಲುಪಿಸಬೇಕು. ನಾವು ಬಿಟ್ಟುಹೋದರೆ ಮುಂದಿನ ಪೀಳಿಗೆಗೆ ಉಳಿಯುತ್ತದೆ.'

### ಕಣವಿಯವರ ಶ್ಲಾಘನೆ

'ಅಂಕೇಗೌಡ ಜ್ಞಾನ ಪ್ರತಿಷ್ಠಾನಕ್ಕೆ ಹೋಗದಿದ್ದರೆ ನಾನು ಪಾಂಡವಪುರಕ್ಕೆ ಬಂದದ್ದೂ ವ್ಯರ್ಥವಾಗುತ್ತಿತ್ತು. ವಿಜಯಲಕ್ಷ್ಮೀ ಹಾಗೂ ಅಂಕೇಗೌಡರು ಸ್ವಂತ ಪರಿಶ್ರಮದಿಂದ ಹಾಗೂ ಸ್ವಂತ ಖರ್ಚಿನಿಂದ ಸಂಗ್ರಹಿಸಿರುವ ಈ ಗ್ರಂಥಾಲಯ ನಿಜಕ್ಕೂ ಅದ್ಭುತವಾಗಿದೆ. ಕರ್ನಾಟಕದಲ್ಲಂತೂ ನಾನು ಇದುವರೆಗೆ ಎಲ್ಲಿಯೂ ಇಂಥ ಮಹತ್ಕಾರ್ಯವನ್ನು ಕಂಡಿಲ್ಲ.'

ಹಿರಿಯ ಕವಿ ಚೆನ್ನವೀರ ಕಣವಿಯವರ ಮನದ ಮಾತಿದು. ದಶಕದ ಹಿಂದೆ ಭೇಟಿ ನೀಡಿದಾಗ ಅವರು ಸಂದರ್ಶಕರ ಪುಸ್ತಕದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದ್ದರು.

## ಅಬ್ಬಾ! ಒಂದೇ... ಎರಡೇ..

ಶತಮಾನಗಳಷ್ಟು ಹಳೆಯದಾದ ಪುಸ್ತಕಗಳು. ಕಣ್ಣು ದಣಿಯುವಷ್ಟು ಟೈಟಲ್‌ಗಳು. ಜೈನ, ಶರಣ, ದಾಸ ಸಾಹಿತ್ಯ, ಬೌದ್ಧ ಸಾಹಿತ್ಯ, ಪುರಾಣ, ಇತಿಹಾಸ, ಹಳೆಗನ್ನಡ, ಕಥಾ ಸಂಕಲನಗಳು, ಕಾವ್ಯಗಳು, ಕಾದಂಬರಿ, ಪ್ರಬಂಧ, ಆತ್ಮಚರಿತ್ರೆ, ನಾಟಕಗಳು, ಶಿಲ್ಪಕಲೆ, ಸಂಗೀತ, ವೈದ್ಯಕೀಯ,

### ನಾವು ಒಳ್ಳೆಯವರಾಗಬೇಕು...

ಮೊನ್ನೆ ಮೇ ತಿಂಗಳಲ್ಲಿ ಅಂಕೇಗೌಡರಿಗೆ ಬೈಗೆ ಹೋಗುವ ಅವಕಾಶ ಪ್ರಾಪ್ತವಾಗಿತ್ತು. ಪಾಸ್‌ಪೋರ್ಟ್‌ಗಾಗಿ ಸಂಬಂಧಪಟ್ಟ ಕಚೇರಿಗೆ ಭೇಟಿ. ದಾಖಲೆ ಪರಿಶೀಲನೆ, ಸಾಕ್ಷಿ, ಸಂದರ್ಶನ ಎಲ್ಲದರಲ್ಲೂ ಪಾಸ್.

ಇನ್ನೇನು ಕೊನೆಯ ಸಹಿ ಬೀಳಲೊಂದೇ ಬಾಕಿ! ಆ ಅಧಿಕಾರಿಯ ಮುಂದೆ 2014ರಲ್ಲಿ ಸರಕಾರದ ಪ್ರಶಸ್ತಿ ಪ್ರಾಪ್ತವಾದ ಕುರಿತು ವರದಿಯ ಪತ್ರಿಕೆಯ ಪುಟವನ್ನು ತೋರಿಸಿದರು. ಅವರು ತುಂಬಾ ಗೌರವದಿಂದ ನಡೆಸಿಕೊಂಡು ತಕ್ಷಣ ಪಾಸ್‌ಪೋರ್ಟ್ ನೀಡಲು ವ್ಯವಸ್ಥೆಯನ್ನೂ ಮಾಡಿದರು.

'ಈ ದೇಶದಲ್ಲಿ ಒಳಿತನ್ನು ಕಾಣುವ ಅಧಿಕಾರಿಗಳಿದ್ದಾರೆ. ಮೊದಲು ನಾವು ಒಳ್ಳೆಯವರಾಗಬೇಕು.' ಅಂಕೇಗೌಡರ ಮಾತಿನಲ್ಲಿ ವರ್ತಮಾನಕ್ಕಿರುವ ಸಂದೇಶ ಮಿಂಚಿ ಮರೆಯಾಯಿತು.

## ನನ್ನ ಕನ್ನಡ

**ಎಂ.ಡಿ. ಪಲ್ಲವಿ,**
ಗಾಯಕಿ



### ಕಾವ್ಯಲೋಕ-ಭಾವಲೋಕ

ನನ್ನ ವ್ಯಕ್ತಿತ್ವಕ್ಕೆ ಕನ್ನಡ ಕೊಟ್ಟ ಕೊಡುಗೆ ಬಹಳ ದೊಡ್ಡದು. ಹುಟ್ಟಿದ್ದು ಬೆಂಗಳೂರಿನಲ್ಲಿಯಾದರೂ, ಬೆಳೆದದ್ದೆಲ್ಲ ಗೋವಾದಲ್ಲಿ. ನನ್ನದು ಅಚ್ಚ ಕನ್ನಡ ಕುಟುಂಬವಾಗಿದ್ದರೂ ಕನ್ನಡ ಭಾಷೆ ಮಾತನಾಡೋಕೆ, ಬರೆಯೋಕೆ, ಓದೋಕೆ ಕಷ್ಟಪಡ್ತಾ ಇದ್ದೆ. ಸುತ್ತಲೂ ಕೊಂಕಣಿ, ಇಂಗ್ಲಿಷ್ ಮತ್ತು ಹಿಂದಿಯ ಪ್ರಭಾವವೇ ಹೆಚ್ಚಿತ್ತು. ನನ್ನ ತಂದೆಗೆ ಮತ್ತೆ ಬೆಂಗಳೂರಿಗೆ ವರ್ಗಾವಣೆ ಆಯಿತು. ಶಾಲೆಯಲ್ಲಿ ಮೊದಲ ಭಾಷೆಯಾಗಿ ಕನ್ನಡವನ್ನೇ ಆಯ್ಕೆ ಮಾಡಿಕೊಂಡೆ. ಓದು, ಬರಹ, ನಾಟಕವನ್ನು ಮಾಡುತ್ತಾ ನೋಡುತ್ತಲೇ ಕನ್ನಡವನ್ನು ಕಲಿಯುತ್ತ ಹೋದೆ.

ಕನ್ನಡ ಭಾಷೆ ನನಗೆ ಕಾಡುವ ಕಾವ್ಯಲೋಕ, ಭಾವಗೀತೆಗಳ ಗುಚ್ಛವನ್ನೇ ಮಡಿಲಿಗಿರಿಸಿದೆ. ನನ್ನ ವ್ಯಕ್ತಿತ್ವ ಮತ್ತು ಅಸ್ತಿತ್ವದ ಜತೆಗೆ ಕನ್ನಡ ಭಾವಗೀತೆಗಳ ಸಖ್ಯವಿದೆ. ಅದನ್ನು ಇಲ್ಲವಾಗಿಸಿದರೆ, ನಾನು ಇಂದಿಗೂ ಶೂನ್ಯವಾಗಿಯೇ ಉಳಿದುಬಿಡುತ್ತೇನೆ. ಗಾಯನಕ್ಕೆ ಹೊಸ ದಾರಿ ಕೊಟ್ಟಿದ್ದು ಕನ್ನಡ. ಬದುಕನ್ನು ರೂಪಿಸಿರುವ ಭಾಷೆ. ನಿತ್ಯ ಜೀವನದ ಆಗುಹೋಗುಗಳ ನಡುವೆ ಸಹಜವಾಗಿ ಬೆರೆಯೋದೆ ಕನ್ನಡತನ. ಪ್ರತಿ ನೂರು ಕಿ.ಮೀ.ಗೆ ಕನ್ನಡ ಭಾಷೆಯ ಸೊಗಡು, ಲಾಲಿತ್ಯವೆಲ್ಲವೂ ಬದಲಾಗಬಹುದು. ಕರ್ನಾಟಕದಲ್ಲಿ ಹಲವು ಕನ್ನಡಗಳಿವೆ. ಇವೆಲ್ಲವನ್ನೂ ಗೌರವಿಸುವುದೇ ನಿಜವಾದ ಕನ್ನಡತನ.

ಇಂಗ್ಲಿಷ್ ಭಾಷೆ ನನಗೆ ಸುಲಭವಾಗಿ ಬಳಕೆಗೆ ದಕ್ಕುವಂಥ ಭಾಷೆ. ಆದರೆ, ಅದು ಅಪ್ಪಟ ಕನ್ನಡ ಮನಸ್ಸಿನ ಇಂಗ್ಲಿಷ್. ಆಂಗ್ಲರು ಮಾತನಾಡುವ ಇಂಗ್ಲಿಷ್ ನನ್ನದಲ್ಲ. ಇಂಗ್ಲಿಷ್ ಮಾತನಾಡುವಾಗಲು ಭಾವಾಭಿವ್ಯಕ್ತಿಯೆಲ್ಲ ಕನ್ನಡದ್ದೇ ಆಗಿರುತ್ತದೆ. ಹಾಗಾಗಿ ಇಂಗ್ಲಿಷ್ ಅಥವಾ ಇತರೆ ಯಾವುದೇ ಭಾಷೆಗಳ ಜತೆಯಲ್ಲಿ ನೇರಳಾಗಿ ನನ್ನ ಜತೆ ಬರುವ ಭಾಷೆ ಕನ್ನಡ.